**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ</u>**

**<u>ಆಳಂದ</u>**

ಸಿ.ಸಿ, ನಂಬರ 4700/2024 ಸಿ.ಡಬ್ಲೂ.1 ಪಿ.ಡಬ್ಲೂ.1

ದಿನಾಂಕ 20-12-2025

ಸತ್ಯ ಪ್ರತಿಜ್ಞೆಯ ಮೇರೆಗೆ

<u>ಮುಂದುವರೆದ ಪಾಟೀ ಸವಾಲುಃ ಆರೋಪಿತರ ಪರಃ **ಶ್ರೀ ಎಸ್. ಎ. ಕೆ.** ವಕೀಲರಿಂದ:</u>

ದೂರನ್ನು ತಡವಾಗಿ ಸಲ್ಲಿಸಲು ಏನು ಕಾರಣ ಎಂದರೆ ಸಾಕ್ಷಿಯು ನಾವು ರೈತರಿಗೆ ಸರ್ಕಾರದ ಆಸ್ತಿಯನ್ನು ಹಾಳು ಮಾಡಬಾರದು ಎಂದು ತಿಳುವಳಿಕೆ ಹೇಳಿದರು ಕೂಡ ಅವರು ಕೇಳಿರುವುದಿಲ್ಲ ಆದಕಾರಣ ತಡವಾಗಿರುತ್ತದೆ ಎಂದು ನುಡಿಯುತ್ತಾರೆ. ನನಗೆ ಯಾವ ಆರೋಪಿಯು ಯಾವ ವಾಹನವನ್ನು ಚಲಾಯಿಸುತ್ತಿದ್ದರು ಎಂದು ಹೇಳಲು ಬರುವುದಿಲ್ಲ ಸಾಕ್ಷಿಯು ಪೋಲಿಸರಿಗೆ ದೂರನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಖುದ್ದಾಗಿ ಆರೋಪಿತರು ಮಣ್ಣನ್ನು ತೆಗೆಯುವುದನ್ನು ನೋಡಿರುವುದಿಲ್ಲ. ಗಂಡೂರಿ ನಾಲೆ ನನ್ನ ಅಧೀನದಲ್ಲಿ ಇದ್ದು ಅದರಲ್ಲಿನ ಸರ್ಕಾರಕ್ಕೆ ಸಂಬಂದಪಟ್ಟ ಜಾಗದಲ್ಲಿ ಇರುವ ಮಣ್ಣನ್ನು ನನ್ನ ನಿರ್ಲಕ್ಷ್ಯತನದಿಂದ ಜನರು ತೆಗೆದುಕೊಂಡು ಹೋಗಿದ್ದು ನನ್ನ ತಪ್ಪನ್ನು ಮುಚ್ಚಿ ಹಾಕಲು ನಾನು ಆರೋಪಿತರ ವಿರುದ್ದ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಅತೀವೃಷ್ಟಿ ಆಗಲೀ ಅಥವಾ ಮಳೆಗಾಲದ ಸಮಯದಲ್ಲಿ ಆಗಲೀ ಅಕ್ಕಪಕ್ಕದಲ್ಲಿ ಇರುವ ಜಮೀನಿನ ಮಣ್ಣು ಕೊಚ್ಚಿ ಕೊಂಡು ಬರುತ್ತದೆ ಎಂದರೆ ಸರಿ. ಹಿಣ್ಣೀರು ಇರುವ ಸ್ಥಳ ಮತ್ತು ವ್ಯಯಕ್ತಿಕ ಜಮೀನಿನ ಮದ್ಯೆ ಯಾವುದೇ ಗಡಿ ರೇಖೆ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ನಾಲೆಯಿಂದ ಇಂತಿಷ್ಟು ಮಣ್ಣನ್ನು ತೆಗೆದುಕೊಂಡರೆ ಅದಕ್ಕೆ ರಾಜಧನ ಕೊಡಬೇಕು ಎಂದು ನಿಯಮ ಇರುತ್ತದೆ ಎಂದರೆ ಸರಿ. ಎಷ್ಟು ಕ್ಯೂಬಿಕ್ ಮೀಟರಿಗೆ ಎಷ್ಟು ರಾಜಧನ ತೆಗೆದುಕೊಳ್ಳಬೇಕು ಎಂದು ನನಗೆ ಗೊತ್ತಿಲ್ಲ ಸಾಕ್ಷಿಯು ಮುಂದುವರೆದು ಕಾರ್ಯಪಾಲ ಅಭಿಯಂತರರಿಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ಎಷ್ಟು ಕ್ಯೂಬಿಕ್ ಮಣ್ಣು ಹೋಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಹಾಗಾದರೆ 2 ಲಕ್ಷ ಹಣ ನಷ್ಟವಾಗಿದೆ ಎಂದು ಯಾವ ಆಧಾರದ ಮೇಲೆ ಹೇಳಿರುತ್ತೀರಿ ಎಂದರೆ ಸಾಕ್ಷಿಯು ದೂರಿನಲ್ಲಿ ಸುಮಾರು 2 ಲಕ್ಷ ಹಣ ಎಂದು ನಮೂದು ಮಾಡಿದ್ದು ಅದು ಹೆಚ್ಚಿಗೂ ಆಗಬಹುದು ಅಥವಾ ಕಡಿಮೆಯೂ ಆಗಬಹುದು ಎಂದು ನುಡಿಯುತ್ತಾರೆ. ನನ್ನ ನಿರ್ಲಕ್ಷ್ಯತನದಿಂದ ಆದ ತಪ್ಪನ್ನು ಮುಚ್ಚಿ ಹಾಕಲು ಆರೋಪಿತರ ವಿರುದ್ದ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ ಆರೋಪಿತರು ಯಾವುದೇ ಮಣ್ಣನ್ನು ತೆಗೆದುಕೊಂಡಿರುವುದಿಲ್ಲ ಆರೋಪಿತರ ವಿರುದ್ದ ಯಾವುದೇ ಸಾಕ್ಷಾಧಾರಗಳು ಇಲ್ಲದೇ ಇದ್ದರು ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣಕ್ಕೆ ಸಂಬಂದಿಸಿದಂತೆ ನ್ಯಾಯಾಲಯದಲ್ಲಿ ಹೊರತುಪಡಿಸಿ ಬೇರೆ ಎಲ್ಲೂ ಸಾಕ್ಷಿ ಹೇಳಿಲ್ಲ ಎಂದರೆ ಸರಿ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಸಿ. ಸಿ. ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ